

ಮೌನೇಶ್ ಬಡಿಗೇರ್ ನಿರ್ದೇಶನದಲ್ಲಿ ವಿವೇಕ್ ಶಾನಭಾಗರ ಕಥೆ 'ನಿರ್ವಾಣ'ದ ಚಿತ್ರೀಕರಣ ದೃಶ್ಯ.

ಸಣ್ಣಕಥೆ ಇದ್ದಂತೆ, ಸಿನಿಮಾದ ಕುಡಿಯಂತೆ ಕಿರುಚಿತ್ರ ಎನ್ನಬಹುದೇನೋ. ಒಂದೆರಡು ನಿಮಿಷಗಳಿಂದ ಹಿಡಿದು ಒಂದು ತಾಸಿನವರೆಗೆ ಇವುಗಳ ಹರಹು ವಿಸ್ತರಿಸಿರುವುದಿದೆ.

ಇದು ಡಾಕ್ಯುಮೆಂಟರಿ ಅಲ್ಲ. ಯಾವುದೋ ಸಂಗತಿಯೊಂದರ ನಿರೂಪಣೆ ಅಥವಾ ದತ್ತಾಂಶಗಳ ದಾಖಲಾತಿಯ ಉದ್ದೇಶಕ್ಕೆ ಇದು ಸೀಮಿತವಾದುದೂ ಅಲ್ಲ. ಕಿರುಚಿತ್ರ ಕಥೆ ಹೇಳುತ್ತದೆ. ಆ ಕಥೆಯ ಮೂಲಕ ವರ್ತಮಾನದ – ನಮ್ಮ ಬದುಕಿನ ಯಾವುದೋ ಸಂಗತಿಯ ಮೇಲೆ ಬೆಳಕು ಚೆಲ್ಲುತ್ತದೆ. ವ್ಯಾಪಾರಿ ಸಿನಿಮಾಗಳ ಮೂಲಸ್ರೋತವಾದ ರಂಜನೆ–ಪ್ರಚೋದನೆಯ ಉದ್ದೇಶಗಳು ಇಲ್ಲೂ ಇವೆ. ಆದರೆ, ಕಿರುಚಿತ್ರಗಳ ಪ್ರಮುಖ ಉದ್ದೇಶ ಲಾಭ ಗಳಿಕೆಯಲ್ಲ. ಹಾಗೆ ನೋಡಿದರೆ ಲಾಭ ಗಳಿಕೆಯ ಉದ್ದೇಶ ಇಲ್ಲಿ ನಗಣ್ಯವಾದುದು. ಕಿರುಚಿತ್ರ ತಯಾರಿಯ ಹಿಂದೆ ತನ್ನ ಯೋಚನೆಗಳನ್ನು ತಲುಪಿಸುವ ತುಡಿತ ಅಥವಾ ಸಿನಿಮಾ ಮಾಧ್ಯಮದಲ್ಲಿ ತನಗೆ ಹೇಳಲಾಗದುದನ್ನು ಕಿರುಚಿತ್ರದಲ್ಲಿ ಹಿಡಿದಿಡುವ ಪ್ರಯತ್ನ ಕಾಣಿಸುತ್ತದೆ.

"ಸಿನಿಮಾ ಎನ್ನಿಸಿಕೊಳ್ಳಲು ಅಗತ್ಯವಾದ ಅವಧಿಯನ್ನು ಹೊಂದಿಲ್ಲದ ಚಲನಚಿತ್ರಗಳನ್ನು ಷಾರ್ಟ್ ಫಿಲ್ಮ್ ಎನ್ನಬಹುದು'' – ಇದು ಕಿರುಚಿತ್ರಗಳ ಕುರಿತು 'ಅಕಾಡೆಮಿ ಆಫ್ ಮೋಷನ್ ಪಿಕ್ಚರ್ ಆರ್ಟ್ಸ್ ಅಂಡ್ ಸೈನ್ಸಸ್' ವ್ಯಾಖ್ಯಾನ. ಈ ಸಂಸ್ಥೆಯ ಪ್ರಕಾರ ಕಿರುಚಿತ್ರವೊಂದರ ಅವಧಿ ನಲವತ್ತು ನಿಮಿಷ ಮೀರಬಾರದು. ಆದರೆ, ಕಾಲಾವಧಿಗೆ ಕಟ್ಟುಬೀಳದ ಕಿರುಚಿತ್ರಗಳೂ ರೂಪುಗೊಂಡು, ಮನ್ನಣೆ ಗಳಿಸಿರುವುದಿದೆ.

ಬದಲಾಗುತ್ತಿರುವ ಸಂದರ್ಭದಲ್ಲಿನ ಕಾಲದ ಪರಿಕಲ್ಪನೆಗೂ ಕಿರುಚಿತ್ರಗಳಿಗೂ ಸಂಬಂಧ ಇರುವುದನ್ನು ತಳ್ಳಿಹಾಕುವಂತಿಲ್ಲ. "ನಮ್ಮ ಏಕಾಗ್ರತೆಯ ಮಟ್ಟ ಕುಸಿಯುತ್ತಿದೆ. ಶಾಲಾ–ಕಾಲೇಜುಗಳನ್ನೇ ನೋಡಿ: ತರಗತಿಗಳ ಅವಧಿ ಕಡಿಮೆಯಾಗುತ್ತಿದೆ. ಪತ್ರ ವ್ಯವಹಾರ ಇ–ಮೇಲ್, ಎಸ್ಎಂಎಸ್‌ಗೆ ಬಂದಿಳಿದಿದೆ. ವಾಟ್ಸಾಪ್ ಜನಪ್ರಿಯಗೊಂಡಿದೆ. ಇವೆಲ್ಲದರ ಜೊತೆಗೆ ಕಿರುಚಿತ್ರಗಳನ್ನು ಗುರ್ತಿಸಬೇಕಿದೆ" ಎನ್ನುತ್ತಾರೆ ಕಲಾವಿದರ ಹಾಗೂ ಕಲಾ ಪ್ರಾಧ್ಯಾಪಕ ಎಚ್.ಎ. ಅನಿಲ್ ಕುಮಾರ್.

"ದೊಡ್ಡ ಕ್ಯಾನ್ವಾಸ್ ಕಿರಿದಾಗುತ್ತಾ ಬಂದಿದೆ. ಏಕಶಿಲಾ ನಿರ್ಮಿತಿಯ ಕಾಲವೂ ಇದಲ್ಲ" ಎನ್ನುವ ಅನಿಲ್‌ರ ಮಾತುಗಳಲ್ಲಿ ಈ ಕಾಲಘಟ್ಟದ "ಹ್ರಸ್ವ"ಪ್ರಿಯತೆಯ ರೂಪದಲ್ಲಿ ಕಿರುಚಿತ್ರಗಳನ್ನು ಕಾಣಬಹುದಾಗಿದೆ. ಕಿರುಚಿತ್ರಗಳಿಂದಾಗಿ ಕಲಾವಿದರಿಗೂ ಅನುಕೂಲವಾಗಿರುವುದರ ಬಗ್ಗೆ ಅವರು ಗಮನ ಸೆಳೆಯುತ್ತಾರೆ. ಹಿಂದೆಲ್ಲ ಕಲಾವಿದನೊಬ್ಬ ತನ್ನ ಕಲಾಕೃತಿಗಳನ್ನು ವಿದೇಶಕ್ಕೆ ಕಳುಹಿಸುವುದು ಹೆಚ್ಚು ವೆಚ್ಚದ ಕೆಲಸವಾಗಿತ್ತು. ಈಗ ವಿಡಿಯೊ ಪ್ರೆಸೆಂಟೇಷನ್ ಮೂಲಕ ಕಲಾಕೃತಿಗಳನ್ನು ಸುಲಭವಾಗಿ ರವಾನಿಸಬಹುದು ಎನ್ನುವುದು ಅವರ ಅನುಭವದ ಮಾತು.

### ಸಿನಿಮಾ ಪ್ರವೇಶಕ್ಕೆ ಚಿಮ್ಮುಹಲಗೆ

ಸಿನಿಮಾ ಆಕಾಂಕ್ಷಿಗಳು ದೃಶ್ಯ ಮಾಧ್ಯಮದ ವ್ಯಾಕರಣವನ್ನು ದಕ್ಕಿಸಿಕೊಳ್ಳುವ ನಿಟ್ಟಿನಲ್ಲಿ ತಾಲೀಮಿನ ರೂಪದಲ್ಲಿ ಕಿರುಚಿತ್ರಗಳ ನಿರ್ಮಾಣದಲ್ಲಿ ಆಸಕ್ತಿ ತಳೆಯುವುದಿದೆ. ತಂತ್ರಜ್ಞರು– ಕಲಾವಿದರು ಈ ಕಿರುಚಿತ್ರಗಳನ್ನು ತಮ್ಮ ಬಯೋಡೇಟಾದ ತೂಕ ಹೆಚ್ಚಿಸಿಕೊಳ್ಳಲು ಬಳಸುವುದಿದೆ.

"ಸಿನಿಮಾ ಮಾಡುವ ಕನಸು ಹೊಂದಿರುವ ತಂತ್ರಜ್ಞರು, ಕಲಾವಿದರ ಪಾಲಿಗೆ ಕಿರುಚಿತ್ರ ಬಹುದೊಡ್ಡ ಆಕರ್ಷಣೆ. ನಮ್ಮಲ್ಲಿ ಶೇ. 80ರಷ್ಟು ಜನರು ತಮ್ಮ ಬಯೋಡೇಟಾದ ಭಾಗವಾಗಿಯೇ ಕಿರುಚಿತ್ರಗಳನ್ನು ಮಾಡುತ್ತಾರೆ. ಉಳಿದವರಷ್ಟೇ ಇದನ್ನು ಗಂಭೀರವಾಗಿ ಪರಿಗಣಿಸಿದ್ದಾರೆ'' ಎನ್ನುತ್ತಾರೆ 'ಹರಿವು' ಸಿನಿಮಾಕ್ಕೆ ರಾಷ್ಟ್ರಪ್ರಶಸ್ತಿ ಪಡೆದಿರುವ ನಿರ್ದೇಶಕ ಮಂಸೋರೆ (ಮಂಜುನಾಥ ಸೋಮಕೇಶವ ರೆಡ್ಡಿ).

"ನನಗೆ ನಿರ್ದೇಶನ ಬರುತ್ತೆ. ಥ್ರಿಲ್ಲರ್ ಕಥೆಯನ್ನು ಚೆನ್ನಾಗಿ ನಿರೂಪಿಸಬಲ್ಲೆ... ಹೀಗೆ ಸಿನಿಮಾ ನಿರ್ಮಾಪಕರಿಗೆ ಮನದಟ್ಟು ಮಾಡಿಕೊಡುವ ಉದಾಹರಣೆಗಳಾಗಿ ಕಿರುಚಿತ್ರಗಳನ್ನು ರೂಪಿಸುವವರ ಸಂಖ್ಯೆ ಹೆಚ್ಚು. ಆದರೆ, ಮದನ್‌ರಾಮ್ ವೆಂಕಟೇಶ್ ಅವರಂತೆ